
ಡಾ.ವಿನೋದ ಛೆಬ್ಬಿ

ಸಂಗಾತಿಯೊಡನೆ ಬಾಂಧವ್ಯ ಪ್ರಜ್ಞೆ ಬೆಳೆಸಿಕೊಳ್ಳುವುದು ಇಳಿವಯಸ್ಸಿನಲ್ಲಾದರೂ ನಡೆಯಲಿ.

# 343: ಹೊಸ ದಾರಿ - 83

ಯಜಮಾನಿಕೆ ಅಭ್ಯಾಸವಾದ ಇಳಿವಯಸ್ಸಿನ ಗಂಡಸರು ದಾಂಪತ್ಯದಲ್ಲಿ ಸುಖವನ್ನು ಬರಮಾಡಿಕೊಳ್ಳುವುದರ ಬಗೆಗೆ ಹೋದಸಲ ಮಾತೆತ್ತಿದ್ದೆ. ಇದು ಪ್ರಕಟವಾಗುವ ಮುಂಚೆ ಇದಕ್ಕೆ ಪ್ರತಿಕ್ರಿಯೆಯೋ ಎಂಬಂತೆ ಹಿರಿಯ ಗಂಡಸರೊಬ್ಬರು ಬರೆದಿದ್ದಾರೆ: 'ಒಂಟಿ ಹೆಣ್ಣಿನ ಇಷ್ಟ ಒಪ್ಪಿಕೊಳ್ಳುವುದು ಸಮಂಜಸ. ಅವಳಿಗೂ ಗಂಡಿನಷ್ಟೇ ಅವಕಾಶ ಬೇಕು. ಅವರೂ ಅದನ್ನು ಬಳಸಬೇಕು. ಹಾಗಿದ್ದಲ್ಲಿ ಮಾತ್ರ ರತಿಸುಖದಿಂದ ವಂಚಿತರಾಗುವುದು ತಪ್ಪುತ್ತದೆ'. ನಾನು ಭಲೇ ಎನ್ನಬೇಕು ಅಂದುಕೊಳ್ಳುತ್ತಿರುವಾಗ ಇನ್ನೊಂದು ಮಾತು ಸೇರಿಸಿದ್ದಾರೆ: 'ಇಳಿ ವಯಸ್ಸಿನ ಗಂಡು, ಪತ್ನಿ ಇದ್ದಾಗ್ಯೂ, ಇತರ ಒಂಟಿ ಇಳಿವಯಸ್ಸಿನ ಹೆಣ್ಣುಮಕ್ಕಳಿಗೆ ರತಿಸುಖ ಕೊಟ್ಟು, ತಾನೂ ಅನುಭವಿಸಲು ಬಯಸಿದರೆ ತಪ್ಪೇನಿಲ್ಲ. ಇದು ನನ್ನ ಅನಿಸಿಕೆ ಹಾಗೂ ಆಸೆ'. ಇವರ ಅನಿಸಿಕೆ, ಆಸೆ ನ್ಯಾಯವಾದುದೇ; ಆದರೆ, 'ಪತ್ನಿ ಇದ್ದಾಗ್ಯೂ' ಹೆಣ್ಣಿನ ಹಕ್ಕನ್ನು ಒಪ್ಪಿಕೊಳ್ಳುವ ನೆಪದಲ್ಲಿ ತಮಗೆ ತಾವೇ ಸಲ್ಲದ ಅನುಮತಿ ಕೊಟ್ಟುಕೊಳ್ಳುತ್ತಿದ್ದಾರೆ! ನನ್ನತಲೆ ಗಿರ್ರೆಂದಿತು.

ಹೆಂಡತಿಯಿದ್ದೂ, ಆಕೆಯೊಂದಿಗೆ ಸಂಸಾರ ಮಾಡಿಕೊಂಡಿದ್ದೂ, ಆಕೆ ಕಾಮಕ್ರಿಯೆಗೆ ಒಪ್ಪುತ್ತಿಲ್ಲ ಎನ್ನುವ ಒಂದೇ ಕಾರಣಕ್ಕೆ ಪರಸಂಗ ಮಾಡಲು ಹೊರಟವರು ನಮ್ಮಲ್ಲಿ ಸಾಕಷ್ಟು ಇದ್ದಾರೆ. ಬಾಂಧವ್ಯವನ್ನು ಬದಿಗೊತ್ತಿದ ಹಕ್ಕು ಸಾಧನೆಯನ್ನು ಮೆರೆಸುತ್ತಿದ್ದಾರೆ. ಸಂಗಾತಿಯನ್ನು ಕಾಮಕೂಟಕ್ಕಾಗಿ ಒಲಿಸಿಕೊಳ್ಳಬೇಕು ಹಾಗೂ ಅದಕ್ಕಿಂತ ಮುಂಚೆ ಬಾಂಧವ್ಯ ಕಟ್ಟಿಕೊಳ್ಳಬೇಕು ಎನ್ನುವ ಅನಿಸಿಕೆ ಕಾಣೆಯಾಗಿರುವುದು ಸ್ಪಷ್ಟವಾಗಿದೆ. ನಿನ್ನಿಂದ ಸುಖ ಸಿಗದಿದ್ದರೆ ನೀನೇ ಬೇಡ! ಹೋಟೆಲ್‌ನಲ್ಲಿ ತನಗಿಷ್ಟದ ತಿಂಡಿ ಇಲ್ಲವೆಂದು ಗೊತ್ತಾದಾಗ ಎದ್ದು ಇನ್ನೊಂದು ಹೋಟೆಲ್ ಹುಡುಕಿಕೊಂಡು ಹೋಗುವ ಧೋರಣೆಗಿಂತ ಇದೇನೂ ಭಿನ್ನವಾಗಿಲ್ಲ. ಸಾಕಾಗದ್ದಕ್ಕೆ ಇಲ್ಲೊಂದು ಕುತರ್ಕವೂ ಎದ್ದುಕಾಣುತ್ತದೆ: ಇನ್ನೊಬ್ಬಳನ್ನು ಬಯಸುವ ಗಂಡಸರಿಗೆ ಹೆಂಡತಿ, 'ನಾನೂ ಹೀಗೆ ಮಾಡಿದರೆ ಒಪ್ಪುತ್ತಿದ್ದಿರಾ?' ಎನ್ನುವ ಪ್ರಶ್ನೆಗೆ, 'ಖಂಡಿತವಾಗಿಯೂ. ಅದಕ್ಕೇನಂತೆ, ನೀನೂ ಇನ್ನೊಬ್ಬರ ಸಹವಾಸ ಮಾಡಿದರೆ ಅಡ್ಡಿಯಿಲ್ಲ' ಎಂದು ಪೊಳ್ಳು ಉತ್ತರ ಕೊಡುವ ಪರಿಪಾಠವಿದೆ. ಉತ್ತರ ಪೊಳ್ಳು ಯಾಕೆಂದರೆ, ಸಂಗಾತಿ ಹಾಗೆ ಮಾಡುವುದಿಲ್ಲವೆಂದು ಇವರಿಗೆ ಗೊತ್ತು! ಆಕೆಯ ಸಾಧ್ವಿತನವನ್ನು ಆಕೆಯ ವಿರುದ್ಧವೇ ಬಳಸಿ ಲಾಭ ಪಡೆದುಕೊಳ್ಳುವ ಉಪಾಯವಿದು. ಇಲ್ಲಿ ಒಪ್ಪಿಗೆಯಲ್ಲ, ಮನಃಪೂರ್ವಕ ಸ್ವೀಕೃತಿ ಮುಖ್ಯ. ಯಾಕೆ? ಒಪ್ಪಿಗೆಯನ್ನು ಮನಸ್ಸಿಲ್ಲದೆಯೂ ಕೊಡಬಹುದು. (ಏನಾದರೂ ಮಾಡಿಕೊಂಡು ಹಾಳಾಗಿ ಹೋಗಿ!) ಒಬ್ಬರಿದ್ದಾಗಲೂ ಇನ್ನೊಬ್ಬರ ಜೊತೆಯನ್ನು ನಾವು ಯಾವ ಉದ್ದೇಶಕ್ಕಾಗಿ ಬಯಸುತ್ತೇವೆ ಎನ್ನುವುದರಲ್ಲಿ ಗಹನತೆ ಇದೆ ಎಂದೆನಿಸಿತು.

ಇಂಥ ಗಂಡಸರ ಪ್ರಕಾರ ರತಿಸುಖ ಎಂದರೇನು? ಕಾಮಕೂಟ, ಅದರಲ್ಲೂ ಯೋನಿಶಿಶ್ನದ ಸಂಯೋಗ. ಸಂಭೋಗದಲ್ಲಿ ಪಾಲುಗೊಳ್ಳಲು ಅಲ್ಪಪರಿಚಯದ ಹೆಂಗಸಾದರೂ ಸರಿ, ಯಜಮಾನಿಕೆಯ ಧೋರಣೆಯ ಗಂಡಸರು ಮುಗಿಬೀಳುತ್ತಾರೆ ಎನ್ನುವುದು ಸರ್ವಸಾಮಾನ್ಯ. ಮುಗಿಬೀಳುವುದು ಏರುವಯಸ್ಸಿನ ಹೆಂಗಸರಲ್ಲೂ ಕಂಡುಬರುತ್ತದೆ; ಆದರೆ ವಯಸ್ಸಾದ ಹಾಗೂ ಗಂಡಸನ್ನು ಕಂಡಿರುವವರ ಕತೆಯೇ ಬೇರೆ. ರತಿಕ್ರೀಡೆಗೆ ತಯಾರಾಗುವ ಮುಂಚೆ ಹೆಣ್ಣು ಎಂಥ ಹಾಗೂ ಎಷ್ಟು ಗಾಢ ಸಂಬಂಧವನ್ನು ಬಯಸುತ್ತಾಳೆ, ಹಾಗೂ ಅದಕ್ಕೆ ಎಷ್ಟು ಕಾಲ ಹಿಡಿಯಬಹುದು ಎನ್ನುವುದು ಹೆಚ್ಚಿನ ಗಂಡಸರ ಅಂದಾಜಿಗೇ ಎಟುಕುವುದಿಲ್ಲ. ಇದನ್ನು ಸ್ಪಷ್ಟಪಡಿಸಲು ಸರಳ ಪ್ರಶ್ನೆಯೊಂದಿದೆ: ಒಲವಿನ (ಹೆಂಡತಿಯಲ್ಲದ) ಹೆಣ್ಣಿನೊಡನೆ ಹಲವು ರಾತ್ರಿಗಳನ್ನು ಪ್ರೀತಿ ಪ್ರೇಮ ತೋರಿಸುತ್ತ, ಹರಟೆ ಹೊಡೆಯುತ್ತ, ಅಂತರಂಗವನ್ನು ಬಿಚ್ಚಿಕೊಳ್ಳುತ್ತ – ಆದರೆ ಕಾಮಕೂಟವಿಲ್ಲದೆ – ಕಳೆಯಬಲ್ಲಿರಾ? ಈ ಪ್ರಶ್ನೆಗೆ ಒಬ್ಬ ಗಂಡಸು ಉತ್ತರಿಸಿದ್ದೇನು? 'ಹಾಗಾದರೆ ಹೆಣ್ಣಿಗೆ ಗೆಳತಿ ಸಾಕಲ್ಲವೆ? ಗಂಡಸೇಕೆ ಬೇಕು?' ಅರ್ಥವಾಯಿತಲ್ಲವೆ? ಗಂಡಸರು 'ಶಿಶ್ನ ಮನಸ್ಥಿತಿ'ಯನ್ನು ಬಿಟ್ಟುಕೊಟ್ಟು ಗೆಳತಿಯರಾಗದ ಹೊರತೂ ಹೆಣ್ಣನ್ನು ಅರ್ಥಮಾಡಿಕೊಳ್ಳಲಾರರು. ಜಗತ್ತಿನಾದ್ಯಂತ ಸರ್ವೇಕ್ಷಣೆಯಲ್ಲಿ ಕಂಡುಬಂದ ಬಹುಮುಖ್ಯ ಅಂಶವೆಂದರೆ ಎಲ್ಲ ಹೆಂಗಸರೂ ತಮ್ಮ ಸಂಗಾತಿಯಿಂದ ಕಾಮಕೂಟದ ಬದಲು ಸುಖವನ್ನೇ ಹೆಚ್ಚಾಗಿ ಬಯಸುತ್ತಾರೆ! ಮೊದಲು ಸುಖ, ನಂತರ ಪ್ರಣಯ, ಕಾಮಕೂಟ, ಅಂತಿಮವಾಗಿ ಸಂಭೋಗ, ನಂತರವೂ ಸರಸ – ಎನ್ನುವ ಸರಳ ಸರಣಿಯನ್ನು ಅರ್ಥಮಾಡಿಕೊಳ್ಳಲು ಮನಸ್ಸು ಮಾಡದಿರುವುದಕ್ಕೆ ಯಜಮಾನಿಕೆಯ ಮನೋಭಾವವೇ ಕಾರಣ ಎಂದೆನಿಸುತ್ತದೆ. ವಿಪರ್ಯಾಸವೆಂದರೆ, ಹೊರಹೆಣ್ಣನ್ನು ಒಲಿದು ಬರುವ ತನಕ ಕಾಯುವ ಗಂಡಸರು ಹೆಂಡತಿಯನ್ನು ಒಲಿಸಿಕೊಳ್ಳಲು ಕಾಯಲಾರರು. ಇಲ್ಲಿ ಹೆಂಡತಿಯಿಂದ ಸುಖ ಹಕ್ಕಿನ ವಿಷಯವಾಗಿಬಿಡುತ್ತದೆ. ಹಕ್ಕೊತ್ತಾಯಕ್ಕೆ ಮೈಕೊಡುವ ಹೆಂಗಸರು ಎಷ್ಟು ಹಿಂಸೆ ಅನುಭವಿಸುತ್ತಾರೆ ಎನ್ನುವುದು ಅನುಭವಿಸಿದವರಿಗೇ ಗೊತ್ತು.

ಇನ್ನು, ತನಗೆ ಹೊರಸುಖ ಬೇಕೆಂದು ಹೆಂಡತಿಗೂ ಅನುಮತಿ ಕೊಡುವ ವಿಚಾರಕ್ಕೆ ಬರೋಣ. ನನ್ನ ಪ್ರಶ್ನೆ ಏನೆಂದರೆ, ಪರಸಂಬಂಧದ ಪ್ರಸ್ತಾಪ ಈ ಪ್ರಸಂಗ ಕಾಲಿಟ್ಟ ಮೇಲಲ್ಲ, ಅದಕ್ಕಿಂತಲೂ ಮುಂಚೆಯೇ – ಅಂದರೆ ಅವರ ಸಂಬಂಧದ ಶುರುವಿನಲ್ಲೇ ನಡೆದಿತ್ತೆ? ಇಬ್ಬರೂ ಚರ್ಚಿಸಿ ಒಪ್ಪಿಕೊಂಡಿದ್ದರೆ? ಬಹುಶಃ ಸಾಧ್ಯವಿಲ್ಲ. ಯಾಕೆ? ಮದುವೆಯ ಉದ್ದೇಶವೇ ಏಕನಿಷ್ಠೆ! ಆಟ ಶುರುವಾಗಿ ಸಾಕಷ್ಟು ಮುಂದುವರಿದ ಮೇಲೆ ನಿಯಮಗಳನ್ನು ಏಕಪಕ್ಷೀಯವಾಗಿ ಬದಲಾಯಿಸುವ ಈ ಮನೋಭಾವದಲ್ಲಿ ಒಂದು ಅಗಾಧ ಕೊರತೆಯಿದೆ. ಅದೇನು?

ಬಾಂಧವ್ಯಪ್ರಜ್ಞೆ (relationality): ನಾವು ಮಾನವರು ಸಮಾಜ ಜೀವಿಗಳು. ಬಾಂಧವ್ಯಕ್ಕಾಗಿ ಹಪಹಪಿಸುವ ಏಕಾಂಗಿ ವ್ಯಕ್ತಿಗಳು. ಮೇಲಧಿಕಾರಿಯಿಂದ ಹಿಡಿದು ತರಕಾರಿ ವ್ಯಾಪಾರಿಯವರೆಗೆ ಎಲ್ಲರೊಡನೆಯೂ ಒಂದಿಲ್ಲೊಂದು ರೀತಿಯಲ್ಲಿ ಸಂವಹನಿಸುತ್ತೇವೆ. ಇದು ಬಾಂಧವ್ಯವನ್ನು ಹುಟ್ಟಿಸಲು, ಗಟ್ಟಿಗೊಳಿಸಲು, ಹಾಗೂ ಪುನಶ್ಚೇತನಗೊಳಿಸಲು ನೆರವಾಗುತ್ತದೆ. ಹಾಗೆಂದು ಎಲ್ಲರೊಡನೆ ಪ್ರಾಮಾಣಿಕರಾಗಿದ್ದರೂ ಅಂತರಂಗವನ್ನು ಬಿಚ್ಚಿಕೊಳ್ಳಲು ಆಗುವುದಿಲ್ಲ. ಇದಾಗುವುದು ಒಬ್ಬರೋ ಇಬ್ಬರೋ ಸ್ನೇಹಿತರೊಡನೆ ಮಾತ್ರ. ಯಾರೊಡನೆಯಾದರೂ ಮನಸ್ಸು ಬಿಚ್ಚಿ ಮಾತಾಡಬೇಕು, ಗಾಢ ಸ್ನೇಹ ಕಟ್ಟಿಕೊಳ್ಳಬೇಕು, ಹಾಗೂ ತನ್ನ ನಿಜರೂಪವನ್ನು ತೋರಿಸಿಕೊಳ್ಳಬೇಕು ಎನ್ನುವ ಮನೋಭಾವಕ್ಕೆ 'ಬಾಂಧವ್ಯ ಪ್ರಜ್ಞೆ' ಎಂದು ಹೆಸರಿಸುತ್ತಿದ್ದೇನೆ. ಮೇಲೆ ಹೇಳಿದ ಪುರುಷ ಪ್ರಧಾನ ಧೋರಣೆಯಲ್ಲಿ ಬಾಂಧವ್ಯ ಪ್ರಜ್ಞೆಯಿಲ್ಲ; ಹೆಚ್ಚೆಂದರೆ ಕರ್ತವ್ಯ ಪ್ರಜ್ಞೆಯಿದೆಯಷ್ಟೆ. ಹೆಂಡತಿಗೆ ಸುಖ ಕೊಡಬೇಕು ಎನ್ನುವುದು ಕರ್ತವ್ಯಪ್ರಜ್ಞೆ, ಬಾಂಧವ್ಯ ಪ್ರಜ್ಞೆಯಲ್ಲ. ನನ್ನ ತೊಂದರೆಗಳ ಬಗೆಗೆ ನಿನ್ನಲ್ಲಿ ಹೇಳಿಕೊಳ್ಳಲಾರೆ ಎನ್ನುವವರು ಬಾಂಧವ್ಯಕ್ಕೆ ಮುಚ್ಚಿಕೊಂಡಿರುತ್ತಾರೆ. ಹಾಗೆಂದು, ತೆರೆದುಕೊಳ್ಳುವುದೆಲ್ಲ ಬಾಂಧವ್ಯದ ಲಕ್ಷಣವಲ್ಲ (ಇಂಥ ಗಂಡನ ಬಗೆಗೆ ಒಬ್ಬಳು ಹಂಚಿಕೊಂಡಿದ್ದಾಳೆ: 'ಇವರು ಮುಂಚೆ ಹತ್ತಿರ ಬಂದು ನೋವು ಕೊಡುತ್ತಿದ್ದರು, ಈಗ ದೂರವಾಗುತ್ತೇನೆಂದು ಹೆದರಿಸಿ ನೋವು ಕೊಡುತ್ತಿದ್ದಾರೆ!') ಇನ್ನು, ಹೆಚ್ಚಿನವರು ಹೆಂಡತಿ ಕಿರಿಕಿರಿಗೆ ಹೆದರಿ ಹತ್ತಿರ ಹೋಗಲೂ ಇಷ್ಟಪಡುವುದಿಲ್ಲ. ಆದರೆ ಕಿರಿಕಿರಿಯೇ ಬಾಂಧವ್ಯಕ್ಕೆ ಪೀಠಿಕೆ ಎಂದು ಹೆಚ್ಚಿನ ಗಂಡಸರಿಗೆ ಗೊತ್ತಿಲ್ಲ!

ಇಳಿವಯಸ್ಸಿನಲ್ಲಿ ತನಗ್ಯಾರೂ ಇಲ್ಲವೆಂದು ಅನಿಸುವುದು ಬಾಂಧವ್ಯ ಪ್ರಜ್ಞೆಯ ಕೊರತೆಯಿಂದ. ಹಾಗೆಂದು ಪರಸಂಗಕ್ಕೆ ಕೈಹಾಕಿದರೆ ಕೆಲಕಾಲದ ನಂತರ ಬಾಂಧವ್ಯದ ಕೊರತೆಯಿಂದ ಅದೂ ಕಿರಿಕಿರಿ ಎನಿಸುತ್ತದೆ. ಉಪಾಯವೇನು? ಇರುವ ಸಂಗಾತಿಯೊಡನೆ ಕಾಮಭಾವವನ್ನು ಬದಿಗಿಟ್ಟು ಸ್ನೇಹಿತೆಯಂತೆ ಮುಕ್ತ ಸಂಭಾಷಣೆ ನಡೆಸಿ. ನಿಮ್ಮ ಸಂದಿಗ್ಧತೆಯನ್ನು ಹೇಳಿಕೊಳ್ಳಿ. ಹಕ್ಕು ಸಾಧಿಸಬೇಡಿ. ಬದಲು ಸ್ನೇಹಹಸ್ತ ಚಾಚಿ. ಸಂಭಾಷಣೆ, ಪ್ರಕ್ರಿಯೆ ಹೋದಲ್ಲಿ ಹೋಗಲಿ; ಎಲ್ಲಿ ಹೋದರೂ ಜೊತೆಯಾಗಿರುತ್ತೀರಿ!

ಏನಂತೀರಿ? ಹೇಳಿಕೊಳ್ಳಿ.

**ಸಂಪರ್ಕಕ್ಕೆ: 8494933888;**
**Email: vinod.chebbi@gmail.com**